**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.112/2022

ಸಾಕ್ಷಿಯನ್ನು ದಿಃ **17.01.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ**. RK **ಪರ ಶ್ರೀ**. DG **ವಕೀಲರಿಂದ**:

ನಾನು ವಾದಿ ಪರವಾಗಿ ಹಣಕಾಸಿನ ವಿಷಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ. ವಾದಿ ನನ್ನನ್ನು ಹಣಕಾಸಿನ ವ್ಯವಹಾರ ಆಗಬೇಕಾಗಿದೆ ಬನ್ನಿ ಎಂದು ಕರೆದರು. ವಾದಿ ನನ್ನನ್ನು ವಕೀಲರ ಕಚೇರಿಗೆ ಕರೆದಿದ್ದರು. ಎಲ್ಲಾ ಮಾತುಕತೆಯಾಗಿತ್ತು ನಾನು ಶ್ರೀ. ಸುಂದರೇಶ್ ವಕೀಲರ ಕಚೇರಿಗೆ ಹೋಗಿ ಸಾಕ್ಷಿಯಾಗಿ ಸಹಿ ಹಾಕಿದ್ದೇನೆ. ಶ್ರೀ. ಸುಂದರೇಶ್ ವಕೀಲರ ಕಚೇರಿ ಗೋಕುಲ ರಸ್ತೆಯಲ್ಲಿದೆ. ವಾದಿ 1ನೇ ಪ್ರತಿವಾದಿಗೆ ರೂ. 5 ಲಕ್ಷವನ್ನು ವಕೀಲರ ಕಚೇರಿಯಲ್ಲಿ ಕೊಟ್ಟರು. ರೂ.500ರ ಮುಖಬೆಲೆಯ ನೋಟುಗಳನ್ನು ಕೊಟ್ಟರು. ಆ ದಿನ ನಾನು, ವಾದಿ, ಇನ್ನೊಬ್ಬ ಸಾಕ್ಷಿದಾರರು, 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಇದ್ದರು. ಅವರ ಮಕ್ಕಳ ಹೆಸರು ಗೊತ್ತಿಲ್ಲ. ದಿಃ 19.07.2019 ರಂದು ನಾನು ಅಲ್ಲಿಗೆ ಹೋಗಿ ಸಹಿ ಹಾಕಿದ್ದೆ. ನಾನು ಸಾಕ್ಷಿಯಾಗಿ ಸಹಿ ಹಾಕಿದ್ದೆ. ನಾನು ಹಾಗೂ ಹಣ ಕೊಟ್ಟವರು ಮತ್ತು ತೆಗೆದುಕೊಂಡವರು ಸಹಿ ಹಾಕಿದ್ದೆವು. ನಾನು ಮತ್ತು ವಾದಿ ಬಹಳ ಆತ್ಮೀಯರು ಎಂದರೆ ನಾನು ಮತ್ತು ಅವರ ಗಂಡ ಒಂದೇ ಕಡೆ ಕೆಲಸ ಮಾಡುತ್ತಿದ್ದೆವು. ವಾದಿಯ ಗಂಡನ ಹೆಸರು ಅಶೋಕ. ವಾದಿ ಮತ್ತು ಅವರ ಗಂಡ ಅನ್ಯೋನ್ಯತೆಯಿಂದ ಇದ್ದಾರೆ ಎಂದರೆ ಗೊತ್ತಿಲ್ಲ. ವಾದಿ EWS Housing board Colonyಯಲ್ಲಿ ವಾಸವಿದ್ದಾರೆ. ವಾದಿಯ ಗಂಡ ಎಮ್ಮೆ ಕೊಪ್ಪಲಿನಲ್ಲಿ ವಾಸವಿದ್ದಾರೆ. ವಾದಿ ಅವರ ಗಂಡನ ವಿರುದ್ದ ಇದೇ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ. ವಾದಿ ಮನೆ ಕೆಲಸಕ್ಕೆ ಹೋಗುತ್ತಾರೆ. ವಾದಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ನನಗೆ ಪರಿಚಯ ಇದ್ದಾರೆ ಎಂದರೆ ಇಲ್ಲ.

ನಾನು ಸಹಿ ಹಾಕಿದ ಪತ್ರವನ್ನು ವಾದಿ ತಂದಿದ್ದಾರೆ ಎಂದರೆ ಸರಿಯಲ್ಲ. 1ನೇಪ್ರತಿವಾದಿ ತಂದಿದ್ದಾರೆ. ಎಲ್ಲಿಂದ ತಂದರು ಎಂದು ನಾನು ತಿಳಿದುಕೊಂಡಿಲ್ಲ. ನಿಪಿ–1 ಮತ್ತು 2ರ ದಾಖಲೆಗಳನ್ನು ವಕೀಲರ ಕಚೇರಿಯಲ್ಲಿ ಮಧ್ಯಾಹ್ನ 3 ರಿಂದ 3–30 ಗಂಟೆಗೆ ಬರೆಯಲಾಗಿದೆ. ನಾನು ಮತ್ತು ವಾದಿ ಬಹಳ ಆತ್ಮೀಯರಾದ ಕಾರಣ ವಾದಿಯ ಪರವಾಗಿ ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಮಗ ಕಾಂತರಾಜ್ ನನಗೆ ಗೊತ್ತಿಲ್ಲ. ಸದರಿ ಕಾಂತರಾಜುರವರಿಂದ ನಾನುಮತ್ತು ವಾದಿ ಹಣ ಪಡೆದು ಅವರು ಹಣ ವಾಪಸ್ಸು ಕೇಳಿದ ಕಾರಣ ನಿಪಿ–1 ಮತ್ತು 2ರ ದಾಖಲೆಗಳನ್ನು ನಾನು ಮತ್ತು ವಾದಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಮನೆ ಕೆಲಸ ಮಾಡುವ ಕಾರಣ ರೂ.5 ಲಕ್ಷ ಹಣ ಹೊಂದಿಸಲು ಆಗುವುದಿಲ್ಲ ಎಂದರೆ ವಾದಿ ಟೈಲರಿಂಗ್ ಕೆಲಸ ಕೂಡ ಮಾಡುತ್ತಾರೆ. ವಾದಿ ಮನೆಯಲ್ಲಿಯೇ ಟೈಲರಿಂಗ್ ಮಾಡುತ್ತಾರೆ. ಪ್ರತಿವಾದಿಯರು ವಾದಿಯಿಂದ ಹಣ ಪಡೆಯದೇ ಇದ್ದರೂ ಸಹ ವಾದಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.